ಸಾಕ್ಷಿಯನ್ನು ದಿ: 09.08.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-**

1. ನಾನು ಏಳನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಉಪವಿಭಾಗಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಇತ್ಯರ್ಥವಾದ ಪ್ರಕರಣದಲ್ಲಿ ನಾನು ಪಕ್ಷಗಾರಳಲ್ಲ. ನಾನು ವಾದ ಪತ್ರದಲ್ಲಿ ನಮೂದು ಮಾಡಿರುವ ವಂಶವೃಕ್ಷ ಸರಿಯಾಗಿರುತ್ತದೆ. ಒಂದನೇ ಪ್ರತಿವಾದಿ ಬಿ ಬೋರೆಗೌಡ ಉಃ ಪುಟ್ಟಸ್ವಾಮಿಯವರ ದತ್ತು ಮಗನೆಂದು ನನ್ನ ವಾದ ಪತ್ರದಲ್ಲಿ ತಿಳಿಸಿರುತ್ತೇನೆಂದರೆ ಸರಿ. ಬಿ ಬೋರೆಗೌಡ ಉಃ ಪುಟ್ಟಸ್ವಾಮಿರವರ ಸ್ವತ್ತುಗಳನ್ನು ಒಂದನೇ ಪ್ರತಿವಾದಿಯೇ ಅನುಭವಿಸುತ್ತಿದ್ದಾನೆಂದರೆ ಸರಿ. ಮೂಲ ಪುರುಷ ಸಿದ್ದೇಗೌಡ ಉಃ ಬೋರೆಗೌಡನಿಗೆ ಯಾವ್ಯಾವ ಸ್ವತ್ತುಗಳಿದ್ದವು ಮತ್ತು ಯಾವಾಗ ಮರಣ ಹೊಂದಿರುತ್ತಾರೆಂದು ಗೊತ್ತಿಲ್ಲ. ಬಿ ಸಿದ್ದೇಗೌಡ ಮತ್ತು ಬಿ ಬಸವೇಗೌಡ ಯಾವಾಗ ಮರಣ ಹೊಂದಿರುತ್ತಾರೆಂದು ಗೊತ್ತಿಲ್ಲ. ಸಿದ್ದೇಗೌಡ ಹಾಗೂ ಬಸವೇಗೌಡ ಯಾವಾಗ ವಿಭಾಗವಾಗಿರುತ್ತಾರೆಂದು ಗೊತ್ತಿಲ್ಲ. ಬಿ ಸಿದ್ದೇಗೌಡ ಮತ್ತು ಬಿ ಬಸವೇಗೌಡ ರವರಿಗೆ ಯಾವ್ಯಾವ ಆಸ್ತಿಗಳಿದ್ದವು ಎಂದು ನನಗೆ ಗೊತ್ತಿಲ್ಲ. ಬಿ ಸಿದ್ದೇಗೌಡ ಮತ್ತು ಬಿ ಬಸವೇಗೌಡ ರವರುಗಳು ಅವರವರ ಆಸ್ತಿಗಳಿಗೆ ಸಂಬಂದಪಟ್ಟಂತೆ ಯಾವ್ಯಾವ ದಾಖಲೆಗಳನ್ನು ಮಾಡಿರುತ್ತಾರೆ ಗೊತ್ತಿಲ್ಲ. ಬಿ ಬಸವೇಗೌಡ ತನ್ನ ಮಕ್ಕಳಿಗೆ ಅಸ್ತಿಗಳನ್ನು ಯಾವ ದಾಖಲಾತಿಗಳ ಮುಖಾಂತರ ಕೊಟ್ಟಿರುತ್ತಾರೆ ಗೊತ್ತಿಲ್ಲ. ಬಿ ಬಸವರಾಜೇಗೌಡ ನನಗೆ ತಾತನಾಗಬೇಕು. ನನ್ನ ತಾತ ಬಿ ಬಸವರಾಜೇಗೌಡನಿಗೆ ಯಾವ್ಯಾವ ಆಸ್ತಿಗಳಿದ್ದವು ಎಂದು ಗೊತ್ತಿಲ್ಲ. ನನ್ನ ತಾತ ಬಿ ಬಸವರಾಜೇಗೌಡನಿಗೆ ನಾಲ್ಕು ಜನ ಮಕ್ಕಳಿರುತ್ತಾರೆ, ಅವರುಗಳೆಂದರೆ ಬೃಂದಾ, ನನ್ನ ತಂದೆ ಲಕ್ಷ್ಮಿಕಾಂತ, ಲತಾ ಮತ್ತು ಅನುಸೂಯ. ನನ್ನ ತಂದೆಯ ಸಹೋದರಿಯರು ನನ್ನ ತಾತನ ಆಸ್ತಿಗೆ ಸಂಬಂದಪಟ್ಟಂತೆ ಯಾವುದೇ ದಾಖಲಾತಿ ಬರೆದುಕೊಟ್ಟಿರುವುದಿಲ್ಲ. ಬೃಂದಾ ಮತ್ತು ಲತಾ ಮರಣ ಹೊಂದಿರುತ್ತಾರೆ. ಬೃಂದಾ ಮತ್ತು ಲತಾರವರು ವಿವಾಹವಾಗಿರುತ್ತಾರೆ. ಬೃಂದಾ ಮತ್ತು ಲತಾ ರವರ ಗಂಡಂದಿರು ಮರಣ ಹೊಂದಿದ್ದು ಮಕ್ಕಳು ಇರುತ್ತಾರೆ. ಬೃಂದನಿಗೆ ಇಬ್ಬರು ಮಕ್ಕಳಿರುತ್ತಾರೆ ಅವರೆಂದರೆ ರವಿ ಮತ್ತು ಗಿರೀಶ. ರವಿ ಈಗ ಮರಣ ಹೊಂದಿದ್ದು ಅವನಿಗೆ ಹೆಂಡತಿ ಮಕ್ಕಳಿರುತ್ತಾರೆ. ರವಿಯವರ ಹೆಂಡತಿ ಹೆಸರು ಶೋಭ ಮತ್ತು ಅವನ

ಇಬ್ಬರು ಮಕ್ಕಳ ಹೆಸರು ಗೊತ್ತಿಲ್ಲ. ಲತಾನಿಗೆ ಮೂರು ಜನ ಮಕ್ಕಳು ಅವರೆಂದರೆ ಮಂಗಳ, ರೇಖಾ ಮತ್ತು ಮನು. ಬೃಂದಾ ಮತ್ತು ಲತಾಳಾ ವಾರಸುದಾರರು ನಮ್ಮ ತಂದೇಗಾಗಲೀ ನಮ್ಮ ತಾತನಿಗಾಗಲೀ ಯಾವುದೇ ದಾಖಲಾತಿ ಮಾಡಿಕೊಟ್ಟಿಲ್ಲ. ಸದರಿ ಬೃಂದಾ ಮತ್ತು ಲತಾಳ ವಾರಸುದಾರರನ್ನು ಪಕ್ಷಕಾರರನ್ನಾಗಿ ಮಾಡಿಲ್ಲ. ನಾನು ಈ ದಾವೆಯನ್ನು ನಮ್ಮ ಅನುಭವದ ಸ್ವತ್ತನ್ನು ನಮಗೆ ಬಿಟ್ಟುಕೊಡಿ ಎಂದು ಸಲ್ಲಿಸಿರುತ್ತೇನೆ.

2. ನಿಪಿ.14 ರಲ್ಲಿರುವ ಸ್ವತ್ತುಗಳು ನನ್ನ ತಂದೆ ಹೆಸರಿಗೆ ದಾಖಲಾಗಿರುತ್ತವೆಂದರೆ ಸರಿ. ನಿಪಿ.14 ರಲ್ಲಿಯ ಸ್ವತ್ತುಗಳಲ್ಲಿ ನಾವೇ ಸ್ವಾಧೀನದಲ್ಲಿರುತ್ತೇವೆಂದರೆ ಸರಿ. ನಿಪಿ.14 ರ ಪ್ರಕಾರ ಸರ್ವೆ ನಂ.22/1 ಬಿ 14 ಗುಂಟೆ ನನ್ನ ತಂದೆ ಹೆಸರಿಗೆ ದಾಖಲಾಗಿರುತ್ತದೆಂದರೆ ಸರಿ. ನಿಪಿ.14 ನ್ನು ನನ್ನ ತಂದೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ನಿಪಿ.14 ನ್ನು ಓದಿ ತಿಳಿದುಕೊಂಡು ಹಾಜರು ಪಡಿಸಿರುತ್ತೇನೆಂದರೆ ಸರಿ. ನಿಪಿ.7 ರ ಪ್ರಕಾರ ಸರ್ವೆ ನಂ.22/ಬಿ ವಿಸ್ತೀರ್ಣ 1.77 ಏರ್ಸ್ ದಾಖಲಾಗಿರುತ್ತದೆಂದರೆ ಸರಿ. ನಿಪಿ.9 ರ ಪ್ರಕಾರ ಸದರಿ ಸರ್ವೆ ನಂ.22/ಬಿ ವಿಸ್ತೀರ್ಣ 1.77 ಏರ್ಸ್ ದಾಖಲಾಗಿರುತ್ತದೆಂದರೆ ಸರಿ. ಎಸಿ ಮತ್ತು ಡಿಸಿ ನ್ಯಾಯಾಲಯದಲ್ಲಿ ಯಾವ ಸರ್ವೆ ನಂಬರಿಗೆ ಸಂಬಂದಪಟ್ಟಂತೆ ಪ್ರಕರಣ ಇತ್ಯರ್ಥವಾಗಿರುತ್ತದೆಂದು ಗೊತ್ತಿಲ್ಲ. ನಿಪಿ.3 ರ ಪ್ರಕಾರ ಬೋರೇಗೌಡನ ಹೆಸರಿಗೆ ಸರ್ವೆ ನಂ.22 ರಲ್ಲಿ 4 ಎಕರೆ 31 ಗುಂಟೆ ದಾಖಲಾಗಿರುತ್ತದೆಂದರೆ ಸರಿ. 1974 ರಿಂದ 1978 ರವರೆಗೆ ನಿಪಿ.4 ರ ಪ್ರಕಾರ ಬಿ ಬೋರೇಗೌಡ ಉಃ ಪುಟ್ಟಸ್ವಾಮಿಯವರ ಹೆಸರಿಗೆ ಸರ್ವೆ ನಂ.22/ಬಿ ರಲ್ಲಿ 1.77 ಏರ್ಸ್ ದಾಖಲಾಗಿರುತ್ತದೆಂದರೆ ಸರಿ. 1980 ರಿಂದ 1986 ರವರೆಗೆ ನಿಪಿ.5 ರ ಪ್ರಕಾರ ಬಿ ಬೋರೇಗೌಡ ಉಃ ಪುಟ್ಟಸ್ವಾಮಿಯವರ ಹೆಸರಿಗೆ ಸರ್ವೆ ನಂ.22/ಬಿ ರಲ್ಲಿ 1.77 ಏರ್ಸ್ ದಾಖಲಾಗಿರುತ್ತದೆಂದರೆ ಸರಿ. 1969 ರಿಂದ 1974 ರವರೆಗೆ ನಿಪಿ.6 ರ ಪ್ರಕಾರ ಬಿ ಬೋರೇಗೌಡ ಉಃ ಪುಟ್ಟಸ್ವಾಮಿಯವರ ಹೆಸರಿಗೆ ಸರ್ವೆ ನಂ.22/ಬಿ ರಲ್ಲಿ 1.77 ಏರ್ಸ್ ದಾಖಲಾಗಿರುತ್ತದೆಂದರೆ ಸರಿ. 1987 ರಿಂದ 1993 ರವರೆಗೆ ನಿಪಿ.7 ರ ಪ್ರಕಾರ ಬಿ ಬೋರೇಗೌಡ ಉಃ ಪುಟ್ಟಸ್ವಾಮಿಯವರ ಹೆಸರಿಗೆ ಸರ್ವೆ ನಂ.22/ಬಿ ರಲ್ಲಿ 1.77 ಏರ್ಸ್ ದಾಖಲಾಗಿರುತ್ತದೆಂದರೆ ಸರಿ. 1994 ರಿಂದ 1996 ರವರೆಗೆ ನಿಪಿ.10 ರ ಪ್ರಕಾರ ಒಂದನೇ ಪ್ರತಿವಾದಿ ಹೆಸರಿಗೆ ಮತ್ತು 1997 ರಿಂದ 2000 ದವರೆಗೆ ಎರಡನೇ ಪ್ರತಿವಾದಿ ಹೆಸರಿಗೆ ಸರ್ವೆ ನಂ.22/ಬಿ ರಲ್ಲಿ 1.77 ಏರ್ಸ್ ದಾಖಲಾಗಿರುತ್ತದೆಂದರೆ ಸರಿ. 1963 ರಿಂದ 1987 ರವರೆಗೆ ನಿಪಿ.11 ರಿಂದ 13 ರ

ಪ್ರಕಾರ ನನ್ನ ತಾತ ಬಿ ಬಸವರಾಜೇಗೌಡರವರ ಹೆಸರಿಗೆ ಸರ್ವೆ ನಂ.22/ಬಿ ರಲ್ಲಿ 14 ಗುಂಟೆ ದಾಖಲಾಗಿರುತ್ತದೆಂದರೆ ಸರಿ. 1994 ರಿಂದ 2000 ರವರೆಗೆ ನಿಪಿ.15 ರ ಪ್ರಕಾರ ನನ್ನ ತಂದೆ ಲಕ್ಷ್ಮಿಕಾಂತರವರ ಹೆಸರಿಗೆ ಸರ್ವೆ ನಂ.22/ಬಿ ರಲ್ಲಿ 14 ಗುಂಟೆ ದಾಖಲಾಗಿರುತ್ತದೆಂದರೆ ಸರಿ. ಒಂದನೇ ಪ್ರತಿವಾದಿಯ ಜನಕ ತಂದೆ ಲೇಟ್ ಭೈರೇಗೌಡ ಎಂದರೆ ಸರಿ. ಸದರಿ ಭೈರೇಗೌಡ ಒಂದನೇ ಪ್ರತಿವಾದಿಯ ದತ್ತು ತಂದೆಯ ತಮ್ಮ ಎಂದರೆ ಸರಿ. ಸರ್ವೆ ನಂ.22/ಬಿ 4 ಎಕರೆ 31 ಗುಂಟೆಯ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಶಿವಲಿಂಗೇಗೌಡನ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಸರ್ವೆ ನಂ.21 ರ ಜಮೀನು. ಉತ್ತರದ ರಸ್ತೆಯು ಬೆಂಗಳೂರು ಮೈಸೂರು ರಾಷ್ಟ್ರೀಯ ಹೆದ್ದಾರಿಯಾಗಿರುತ್ತದೆ. 4 ಎಕರೆ 31 ಗುಂಟೆ ಪೈಕಿ ರಾಷ್ಟ್ರೀಯ ಹೆದ್ದಾರಿಗೆ ಸ್ವಲ್ಪ ಜಮೀನನ್ನು ಭೂಸ್ವಾಧೀನ ತೆಗೆದುಕೊಂಡಿದ್ದಾರೆಂದರೆ ಸರಿ. ಸದರಿ ಭೂ ಸ್ವಾಧೀನದ ಪರಿಹಾರದ ಹಣವನ್ನು ಎರಡನೇ ಪ್ರತಿವಾದಿ ಪಡೆದಿರುತ್ತಾರೆಂದರೆ ಸರಿ. ಸದರಿ ಪರಿಹಾರ ಪಡೆಯುವ ಸಮಯದಲ್ಲಿ ನಾವು ಯಾವುದೇ ತಕರಾರು ಸಲ್ಲಿಸಿಲ್ಲ. 4 ಎಕರೆ 31 ಗುಂಟೆ ಜಮೀನಿನಲ್ಲಿ ತೆಂಗು, ಮಾವು, ನಿಂಬೆ ಮರಗಳು ಮತ್ತು ತೆರದ ಬಾವಿಯಿರುತ್ತವೆ. 14 ಗುಂಟೆ ಜಮೀನಿನಲ್ಲಿ 2 – 3 ತೆಂಗಿನಮರಗಳಿರುತ್ತವೆ. ಉತ್ತರ ದಿಕ್ಕಿನಲ್ಲಿರುವ ತೆಂಗು, ಮಾವು ಮತ್ತು ನಿಂಬೆಮರಗಳಿಗೆ ತೆರೆದ ಬಾವಿಯಿಂದ ನೀರು ಸರಬರಾಜು ಮಾಡಲಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲಾ ಜಮೀನಿನಲ್ಲಿ ನಾವೇ ಅನುಭವದಲ್ಲಿರುತ್ತೇವೆಂದು ನುಡಿಯುತ್ತಾರೆ. ಪಂಪಸೆಟ್ ಯಾರ ಹೆಸರಿಗಿರುತ್ತದೆಂದು ಗೊತ್ತಿಲ್ಲ. ತೆರೆದ ಬಾವಿ ನಿರ್ಮಿಸಿ ಎಷ್ಟು ವರ್ಷವಾಗಿದೆ ಎಂದು ಗೊತ್ತಿಲ್ಲ. ಬೋರ್ ವೆಲ್ ಎಷ್ಟು ವರ್ಷದ ಹಿಂದೆ ಕೊರೆಸಲಾಗಿದೆ ಎಂದು ಗೊತ್ತಿಲ್ಲ. ಬೋರ್ ವೆಲ್ ಮತ್ತು ತೆರದ ಬಾವಿ ನನ್ನ ತಾತನ ಹೆಸರಿಗೆ ಮತ್ತು ನನ್ನ ತಂದೆ ಹೆಸರಿಗೆ ಇರುವುದಿಲ್ಲ ಎಂದರೆ ಗೊತ್ತಿಲ್ಲ.

3. ಈ ದಾವೆ ಸಲ್ಲಿಸಲು ನಾನು ಮತ್ತು ನನ್ನ ಗಂಡ ಮಾಹಿತಿ ಕೊಟ್ಟಿರುತ್ತೇವೆ. ನಾನು ಸಲ್ಲಿಸಿದ ದಾಖಲಾತಿಗಳನ್ನು ನಾನು ಮತ್ತು ನನ್ನ ಗಂಡ ತೆಗೆದುಕೊಂಡಿರುತ್ತೇವೆ. ನಾವು 14 ಗುಂಟೆಗೆ ಮಾತ್ರ ಕಂದಾಯ ಕಟ್ಟಿರುತ್ತೇವೆ. 14 ಗುಂಟೆ ಹೊರತುಪಡಿಸಿ ನನ್ನ ತಾತನ ಹೆಸರಿಗೆ ಮತ್ತು ನನ್ನ ತಂದೆ ಹೆಸರಿಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ಒಂದನೇ ಪ್ರತಿವಾದಿ ಹೆಸರಿಗೆ ದಾವಾ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತು ದಾಖಲಾಗಿರುತ್ತದೆಂದು ಗೊತ್ತಿಲ್ಲ. ಎರಡನೇ ಪ್ರತಿವಾದಿ ಹೆಸರಿಗೆ ದಾವಾ ಸರ್ವೆ ನಂಬರ್

ನಲ್ಲಿ 4 ಎಕರೆ 17 ಗುಂಟೆ ದಾಖಲಾಗಿದ್ದು ಅದರಲ್ಲಿ 7 ಗುಂಟೆ ರಾಷ್ಟ್ರೀಯ ಹೆದ್ದಾರಿಗೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದರೆ ಸರಿ. ಒಂದನೇ ಪ್ರತಿವಾದಿ ಏನೆಂದು ತಕರಾರು ಸಲ್ಲಿಸಿರುತ್ತಾರೆಂದರೆ ಗೊತ್ತಿಲ್ಲ. ಒಂದನೇ ಪ್ರತಿವಾದಿ ಎಸಿ ಮತ್ತು ಡಿಸಿ ನ್ಯಾಯಾಲಯದಲ್ಲಿ ಏನೆಂದು ತಕರಾರು ಸಲ್ಲಿಸಿರುತ್ತಾರೆಂದು ಗೊತ್ತಿಲ್ಲ. ನನ್ನ ತಂದೆಗೆ ಎಷ್ಟು ಸ್ವತ್ತುಗಳು ಇದ್ದವು ಗೊತ್ತಿಲ್ಲ. ನನ್ನ ತಂದೆ ಸುಮಾರು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. ಸರ್ವೆ ನಂ.22/ಬಿ 14 ಗುಂಟೆ ಹೊರತು ಪಡಿಸಿ ನನ್ನ ತಂದೆ ತನ್ನ ಹೆಸರಿಗಿದ್ದ ಉಳಿದ ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ. ಸಿದ್ದೇಗೌಡ ಉಃ ಬೋರೇಗೌಡನ ಎಲ್ಲಾ ಆಸ್ತಿಗಳನ್ನು ಅವರ ಮಕ್ಕಳು ಹೇಗೆ ಹಂಚಿಕೊಂಡಿರುತ್ತಾರೆಂದು ಗೊತ್ತಿಲ್ಲ. ನನ್ನ ದಾವೆಯಲ್ಲಿ ಮೂಲ ಪುರಷ ಸಿದ್ದೇಗೌಡ ಉಃ ಬೋರೇಗೌಡನಿಗೆ ಎಷ್ಟು ಆಸ್ತಿಗಳು ಇದ್ದವು ಮತ್ತು ಯಾರ್ಯಾರಿಗೆ ಎಷ್ಟೆಷ್ಟು ಹಂಚಿಕೆಯಾಗಿರುತ್ತವೆಂದು ನನಗೆ ಗೊತ್ತಿಲ್ಲ. ಸಿದ್ದೇಗೌಡನ ಮಕ್ಕಳಾದ ಬಿ ಸಿದ್ದೇಗೌಡ ಮತ್ತು ಬಿ ಬಸವೇಗೌಡ ಯಾವ್ಯಾವ ಆಸ್ತಿಗಳನ್ನು ಹೇಗೆ ಹಂಚಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ಮುತ್ತಾತ ಬಿ ಬಸವೇಗೌಡನಿಗೆ ಯಾವ್ಯಾವ ಆಸ್ತಿಗಳು ವಿಭಾಗದಲ್ಲಿ ಬಂದಿದ್ದವು ಮತ್ತು ಅವುಗಳನ್ನು ಯ್ರಾಯಾರಿಗೆ ಎಷ್ಟೆಷ್ಟು ವಿಭಾಗ ಮಾಡಿಕೊಟ್ಟಿರುತ್ತಾರೆಂದು ನನ್ನ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಬಿ ಸಿದ್ದೇಗೌಡನಿಗೆ ವಿಭಾಗದಲ್ಲಿ ಎಷ್ಟೆಷ್ಟು ಆಸ್ತಿಗಳು ಬಂದಿದ್ದವು ಅವುಗಳನ್ನು ಯಾರ್ಯಾರು ಹೇಗೆ ಹಂಚಿಕೊಂಡಿರುತ್ತಾರೆಂದು ನನ್ನ ದಾವೆಯಲ್ಲಿ ತಿಳಿಸಿಲ್ಲ. ಬಿ ಸಿದ್ದೇಗೌಡ ಮತ್ತು ಬಿ ಬಸವೇಗೌಡ ಆಸ್ತಿಗಳನ್ನು ಸಮನಾಗಿ ಹಂಚಿಕೊಂಡಿದ್ದರೋ ಅಥವಾ ಹೆಚ್ಚು ಕಡಿಮೆ ಹಂಚಿಕೊಂಡಿದ್ದರೋ ಎಂದು ನನ್ನ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಬಿ ಬಸವೇಗೌಡನ ಇಬ್ಬರು ಹೆಂಡತಿಯರಿದ್ದು ಅವರ ಮಕ್ಕಳುಗಳು ಸದರಿ ಬಿ ಬಸವೇಗೌಡನ ಆಸ್ತಿಗಳನ್ನು ಹೇಗೆಗೆ, ಯಾವ ರೀತಿ ಎಷ್ಟು ಆಸ್ತಿಗಳನ್ನು ಹಂಚಿಕೊಂಡಿರುತ್ತಾರೆಂದು ನನ್ನ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನನ್ನ ತಾತ ಬಿ ಬಸವರಾಜೇಗೌಡ ಮತ್ತು ಅವನ ಸಹೋದರ ಬಿ ಶಿವಲಿಂಗೇಗೌಡ ಎಷ್ಟೆಷ್ಟು ಆಸ್ತಿಗಳನ್ನು ಹಂಚಿಕೊಂಡಿದ್ದರೆಂದು ನನ್ನ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನನ್ನ ತಾತ ಬಿ ಬಸವರಾಜೇಗೌಡನಿಗೆ ವಿಭಾಗದಲ್ಲಿ ಎಷ್ಟು ಆಸ್ತಿಗಳು ಬಂದಿದ್ದವೆಂದು ನನ್ನ ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನನ್ನ ತಾತನ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿ. ಬಿ ಸಿದ್ದೇಗೌಡನ ಮಕ್ಕಳುಗಳು ವಿಭಾಗ ಮಾಡಿಕೊಂಡು ಈಗ ಬೇರೆ ಬೇರೆ ಅನುಭೋಗದಲ್ಲಿರುತ್ತಾರೆಂದರೆ ಸರಿ. ನಾವು

ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನಾನು ಈ ದಾವೆಯನ್ನು ಸತ್ಯ ಸಂಗತಿಗಳನ್ನು ಮರೆಮಾಚಿ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ನಮ್ಮ ಕುಟುಂಬದ ಜಮೀನುಗಳಿಗೆ ಸಂಬಂದಪಟ್ಟಂತೆ ಯಾವ ಯಾವ ವ್ಯವಹಾರಗಳು ನಡೆದಿರುತ್ತವೆಂದು ನನಗೆ ಕುದ್ದು ಮಾಹಿತಿಯಿಲ್ಲ ಎಂದರೆ ಸರಿ. ನನಗೆ ಈ ದಾವೆಯಲ್ಲಿ ಸಹಿ ಮಾಡಿರುವುದನ್ನು ಹೊರತು ಪಡಿಸಿ ಬೇರೆ ಏನು ಗೊತ್ತಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಸ್ವಲ್ಪ ಗೊತ್ತಿದೆ ಎಂದು ನುಡಿಯುತ್ತಾರೆ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.